ದಿನಾಂಕ 22.07.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

**ಮುಖ್ಯ ವಿಚಾರಣೆಃ- ವಾದಿ ಪರ ವಕೀಲರಿಂದಃ-**

ನಾನು ಈ ದಾವೆಯಲ್ಲಿ ವಾದಿಯಾಗಿದ್ದು, ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರವನ್ನು ಈ ದಿನ ನ್ಯಾಯಾಲಯದಲ್ಲಿ ಸಲ್ಲಿಸಿದ್ದು, ಅದರಲ್ಲಿರುವ ಅಂಶಗಳು ಸತ್ಯವಾಗಿದ್ದು, ಅದರಲ್ಲಿರುವ ಸಹಿ ನನ್ನದೇ ಆಗಿದೆ.

3 ಕ್ಯಾಶ್ ವೋಚರ್ ಗಳನ್ನು ನಿ.ಪಿ.1 ರಿಂದ 3 ಎಂದು, ಬ್ಯಾಂಕ್ ಆಫ್ ಮಹಾರಾಷ್ಟ್ರ ಶಾಖಾ ವ್ಯವಸ್ಥಾಪಕರು ನೀಡಿದ ಅಪ್ಲಿಕೇಶನ್ ಫಾರ್ಮ್ ಅನ್ನು ನಿ.ಪಿ.4 ಎಂದು, ದಿಃ 09.09.2021 ರ ಹಣ ಪಡೆದ ರಶೀದಿಯನ್ನು ನಿ.ಪಿ.5 ಎಂದು, ಪೇ ಸ್ಲಿಪ್ ಅನ್ನು ನಿ.ಪಿ.6 ಎಂದು, ದಿಃ 03.02.2021 ರ ವಕೀಲರ ನೋಟಿಸಿನ ಕಛೇರಿ ಪ್ರತಿಯನ್ನು ನಿ.ಪಿ.7 ಎಂದು, ಅಂಚೆ ರಶೀದಿಗಳನ್ನು ನಿ.ಪಿ.8 ರಿಂದ 12 ಎಂದು, ಅಂಚೆ ಸ್ವೀಕೃತಿಗಳನ್ನು ನಿ.ಪಿ.13 ರಿಂದ ನಿ.ಪಿ. 17 ಎಂದು, ದಿಃ 24.02.2023 ರ ಪ್ರತ್ಯುತ್ತರ ನೋಟಿಸನ್ನು ನಿ.ಪಿ. 18 ಎಂದು ಗುರುತಿಸಲಾಯಿತು.

1 ರಿಂದ 4ನೇ ಪ್ರತಿವಾದಿಗಳ ಪರ ವಕೀಲರು ಗೈರು ಹಾಜರಾಗಿದ್ದು, ಪಾಟೀ ಸವಾಲಿಗಾಗಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ

(ಸಾಕ್ಷಿದಾರರ ಸಹಿ) ಸಹಿ

ಹಿರಿಯ ಸಿವಿಲ್ ನ್ಯಾಯಾಧೀಶರು
ವಿರಾಜಪೇಟೆ.